ಅಸಲು ದಾವಾ ಸಂಃ212/2005
ಡಿ.ಡಬ್ಲ್ಯು:1

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 14.06.2024**

**ಮುಂದುವರೆದ ಪಾಟೀ ಸವಾಲು : ಶ್ರೀ ವಿ.ಜಿ.ಎನ್. ವಾದಿ ಪರ ವಕೀಲರಿಂದ**

ನಾನು ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಶಾನೆ ಡಿ-33 ರಿಂದ 53 ರ ದಾಖಲೆಗಳ ಬಗ್ಗೆ ನನ್ನ ತಕರಾರಿನಲ್ಲಿ ಹೇಳಿರುತ್ತೇನೆ. ನಾನು ಆ ರೀತಿ ತಕರಾರಿನಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳದೇ ಇತ್ತೀಚೆಗೆ ಸೃಷ್ಟಿಪಡಿಸಿ ನಿಶಾನೆ ಡಿ-33 ರಿಂದ 53 ರ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿಶಾನೆ ಡಿ-33 ಮತ್ತು 34 ರ ಪಹಣಿಯು ಸ.ನಂ.219/2 ಮತ್ತು 219/3 ಕ್ಕೆ ಸಂಬಂಧಪಟ್ಟಿದ್ದು ಹಾಗೂ ಸದರಿ ಪಹಣಿಯು ಎಂ.ಕೇಶವರೆಡ್ಡಿ ಬಿನ್ ಟಿ.ಮುನಿವೆಂಕಟಪ್ಪರೆಡ್ಡಿರವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ಸದರಿ ಸ್ವತ್ತುಗಳನ್ನು ನಂಜುಂಡಪ್ಪರವರಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಎಂ.ಕೇಶವರೆಡ್ಡಿ ಬಿನ್ ಟಿ.ಮುನಿವೆಂಕಟಪ್ಪರೆಡ್ಡಿರವರು ಈ ದಾವೆಯ ಪಕ್ಷಗಾರರಲ್ಲ ಎಂದರೆ ಸರಿ. ದಾವಾ ಆಸ್ತಿ ಹಾಗೂ ಸ.ನಂ.219/2 ಮತ್ತು 219/3 ಗಳು ಬೇರೆ ಬೇರೆ ಎಂದರೆ ಸರಿಯಲ್ಲ. ದಾವೆ ಅಧಿವಿಚಾರಣೆಯಲ್ಲಿ ಇದ್ದಾಗ ನಿಶಾನೆ ಡಿ-35

ಸ.ನಂ.219/1ರ ಪಹಣಿಯನ್ನು ಅಧಿಕಾರ ಬಳಸಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗಳ ತಾತ ಆದೆಪ ಬಿನ್ ಆದೆಪರವರ ಹೆಸರಿನಲ್ಲಿದ್ದು ನಂತರ ಅವರ ಮರಣಾನಂತರ ವಾದಿಗಳು ಸದರಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರೂ ಸಹ ನಾನು ಕಂದಾಯ ದಾಖಲೆಗಳನ್ನು ಸೃಷ್ಟಿಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-36 ಸ.ನಂ.219/2 ರ ಸ್ವತ್ತು ವೀರಣ್ಣ ಬಿನ್ ಬಸಪ್ಪರವರಿಗೆ ಸೇರಿರುತ್ತದೆ ಎಂದರೆ ಸರಿ. ವೀರಣ್ಣ ಬಿನ್ ಬಸಪ್ಪರವರು ಈ ದಾವೆಯಲ್ಲಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.219/2 ರ ಸ್ವತ್ತಿಗೂ ಮತ್ತು ಈ ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ 219/1ರ ಸ್ವತ್ತು ನಮ್ಮದು ಹಾಗೂ 219/2 ವೀರಣ್ಣರವರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಮುಂದುವರೆದು ವೀರಣ್ಣರವರು 219/2ರ ಸ್ವತ್ತನ್ನು ಕೇಶವರೆಡ್ಡಿರವರಿಗೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು ದಾವೆಗೆ ಸಂಬಂಧಿಸಿಲ್ಲದ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-43 ಮತ್ತು 44ರಂತೆ ಮ್ಯುಟೇಷನ್ ಪ್ರತಿಗಳನ್ನು ದಾವೆ ಅಸ್ತಿತ್ವದಲ್ಲಿದ್ದಾಗ ಸೃಷ್ಟಿಪಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-46 ನಮೂನೆ 5-6 ಪ್ರತಿಯಲ್ಲಿ ವಾದಿಯ ತಾತ ಆದೆಪ್ಪ ಬಿನ್ ಆದೆಪ್ಪರವರ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ನಿಶಾನೆ ಡಿ-48ರ ಮೂಲ ಪಕ್ಕಾಬುಕ್ಕಿನಲ್ಲಿಯೂ ಸಹ ವಾದಿಯ ತಾತ ಆದೆಪ್ಪ ಬಿನ್ ಆದೆಪ್ಪರವರ ಹೆಸರು ಇದೆ ಎಂದರೆ ಸಾಕ್ಷಿಯು ನಾನು

ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಡಿ–49ರ ಪಕ್ಕಾಬುಕ್ಕಿನಲ್ಲಿಯೂ ಸಹ ವಾದಿಯ ತಾತ ಆದೆಪ್ಪ ಬಿನ್ ಆದೆಪ್ಪರವರ ಹೆಸರು ಇದೆ ಎಂದರೆ ಸರಿಯಲ್ಲ. ನಿಶಾನೆ ಡಿ–51ರ ಕ್ರಯಪತ್ರದಲ್ಲಿರುವ ಪಕ್ಷಗಾರರಿಗೂ ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ–53ರ ಕ್ರಯಪತ್ರದಲ್ಲಿರುವ ಗಂಗರಾಜು, ಗೌರಮ್ಮ, ಮೇಘ ಹಾಗೂ ಕೇಶವರೆಡ್ಡಿರವರು ಈ ದಾವೆಯ ಪಕ್ಷಗಾರರಾಗಿರುವುದಿಲ್ಲ ಎಂದರೆ ನಮಗೆ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಡಿ–53ರಲ್ಲಿರುವ ಸ್ವತ್ತಿಗೂ ಹಾಗೂ ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ವಾದಿಯ ತಾತ ಆದೆಪ್ಪ ಬಿನ್ ಆದೆಪ್ಪರವರಿಗೆ ಸೇರಿದ್ದರೂ ಸಹ ನಾನು ಸೃಷ್ಟಿಪಡಿಸಿದ ನಿಶಾನೆ ಡಿ–35ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು